ಮಗ ಅದೇನು ಹೇಳಿದನೋ, ಹೇಳದೆ ಉಳಿದನೋ, ತಮ್ಮ ಪೈಕಿಯ ಒಂದು ಬಡಕುಟುಂಬವನ್ನು ಈ ಮನೆಯ ಆಗುಹೋಗುಗಳಿಗೆ ಹೆಗಲು ಕೊಡಲು ತಂದು ಕೂರಿಸಿದಳು ರಾಧೆ. ನಡುವಯಸ್ಸಿನ ಗಂಡ, ಹೆಂಡತಿ. ಅಲ್ಲಿ, ಇಲ್ಲಿ ಚಾಕರಿ ಮಾಡಿಕೊಂಡು ಹೊಟ್ಟೆ ಹೊರೆಯುತ್ತಿದ್ದವರು. ಇದ್ದೊಬ್ಬ ಮಗಳಿಗೆ ಮದುವೆ ಮಾಡಿ ಕಳಿಸಿ ಕೊಟ್ಟಿದ್ದಾರೆ. 'ಮಾವನಿಗೆ ಅಡುಗೆ ಮಾಡಿ ಹಾಕ್ಕೊಂಡು, ಜಮೀನಿನ ಕೆಲಸಕ್ಕೆ ಕೈಲಾದ ಸಹಾಯ ಮಾಡ್ಕಂಡು ಇರಿ. ನಿಮಗೆ ಕೊರತೆ ಆಗ್ದಿದ್ದ ಹಾಗೆ ನೋಡ್ಕಂತಾರೆ ಮಾವ. ಅದಕ್ಕೆ ನಾನು ಗ್ಯಾರಂಟಿ...' ಎಂದು ಮನ ಒಲಿಸಿದ್ದಳಂತೆ ರಾಧೆ. ಅವರಿಗೂ ನಾಳಿನ ಚಿಂತೆ ಇದ್ದೇ ಇತ್ತು. ಹೊಟ್ಟೆಪಾಡು ಕಳೆದರೆ ಮತ್ತೇನಿದೆ ಖರ್ಚು? ಕೈಲಿ ನಾಲ್ಕು ಕಾಸು ಉಳಿಸಿಕೊಂಡರೆ ನಾಳೆ ಮಗಳ ಮನೆ ಸೇರಿಕೊಂಡರೂ ತಲೆ ಎತ್ತಿ ಓಡಾಡಿಕೊಂಡಿರಬಹುದು ಎಂದು ಸಕಾರಣವಾಗಿ ಚಿಂತಿಸಿ ಮೂರ್ತಿಗಳ ಮನೆ ಸೇರಿಕೊಂಡಿದ್ದರು ದಂಪತಿ.

ಮಗನ ಮನೆ ಸೇರಿಕೊಂಡು ತೂಕಡಿಸುತ್ತಾ ಹೊತ್ತು ಕೊಲ್ಲುವುದಕ್ಕಿಂತಲೂ ಹುಟ್ಟಿದಾರಭ್ಯ ಅಭ್ಯಸ್ತವಾಗಿದ್ದ ಮನೆಯಲ್ಲಿರುವುದು ಮೂರ್ತಿಗಳಿಗೂ ಪರಮಸುಖ ಅನ್ನಿಸಿತ್ತು. 'ಒಳ್ಳೆಯ ಹುಡುಗಿ', 'ಒಳ್ಳೆಯ ಹುಡುಗಿ' ಎಂದು ತಾವು ಗಂಡ–ಹೆಂಡತಿ ಮೆಚ್ಚಿ ಕೊಂಡಾಡುತ್ತಿದ್ದ ಈ ಸೊಸೆಯನ್ನು ಮಗ ಮನಃಪೂರ್ವಕವಾಗಿ ಮೆಚ್ಚಿ ಕೈ ಹಿಡಿದವನಲ್ಲ. ಜಾತಕದ ಮೇಳಾಮೇಳಿಯಾಗಿ ನೋಡಿಕೊಂಡು ಬಂದ ಹುಡುಗಿಯ ಮನೆಯವರು ಯಾವುದೋ ನೆಪ ಒಡ್ಡಿ ಅವನನ್ನು ನಿರಾಕರಿಸಿ, ವರ್ಷ ಮೂವತ್ಮೂರು ದಾಟಿ, 'ಇನ್ನು ಇವನ ಮದುವೆಯ ಕತೆ ಗಣಪತಿಯ ಮದುವೆಯಾಗಿ ಕೂರುತ್ತದೆ'ಯೆನ್ನುವ ಆತಂಕ ಹೆಚ್ಚಾದಾಗ ಹಿರಿ ಮಗಳು ಯಾರ ಮೂಲಕವೋ ಕಿವಿಗೆ ಬಿದ್ದ ಈ ಸಂಬಂಧದ ಪ್ರಸ್ತಾಪ ತಂದಿದ್ದಳು. 'ಬಿಟ್ಟರೆ ಇದೂ ಇಲ್ಲ' ಎನ್ನುವ ವಾಸ್ತವದ ಅರಿವಿನಿಂದ ಅರೆ ಮನಸ್ಸಿನ ಒಪ್ಪಿಗೆ ಕೊಟ್ಟಿದ್ದ ಮಧುಸೂದನ.

ರೂಪದಲ್ಲಿ ತೀರಾ ತೆಗೆದು ಹಾಕುವಂತಿರಲಿಲ್ಲ ರಾಧೆ. ಆದರೆ ಕಾಲು ಐಬು. ಒಂದು ಕಾಲಿಗಿಂತಾ ಇನ್ನೊಂದು ಕಾಲು ಕೊಂಚ ಗಿಡ್ಡ. ಒಂದು ಕಡೆ ವಾಲಿಕೊಂಡು ಕುಂಟುತ್ತಾ ನಡೆಯುವ ಅನಿವಾರ್ಯ. ಕೈ ತುಂಬಾ ಕೊಟ್ಟು, ಬಿಟ್ಟು ಮಾಡುವಂತವರಾಗಿದ್ದರೆ ಆಸೆಬುರುಕರು ಯಾರಾದರೂ ಸಿಗುತ್ತಿದ್ದರೇನೋ. ಆ ಯೋಗ್ಯತೆಯೂ ಇಲ್ಲದೆ ಕಂಗಾಲಾಗಿದ್ದವರಿಗೆ ನಿಧಿ ಸಿಕ್ಕಿದಂತೆ ಮಧುಸೂದನ ಸಿಕ್ಕಿದ್ದ. ಮನೆಗೆ ಒಬ್ಬನೇ ಮಗ. ಅಷ್ಟಿಷ್ಟು ಆಸ್ತಿಪಾಸ್ತಿ. ಎಲ್ಲಕ್ಕೂ ಮಿಗಿಲಾಗಿ ಮಧುಸೂದನ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಆಫೀಸರ್. ತುಂಬುಮನಸ್ಸಿನಿಂದ ಹುಡುಗಿಯನ್ನು ಧಾರೆ ಎರೆದು ಕೊಟ್ಟಿದ್ದರು ಹೆತ್ತವರು. ಹಸೆಮಣೆಯ ಮೇಲೆ ಕೂತ ಮಧುಸೂದನನ ಮುಖದ ಗಂಟು ಬಿಚ್ಚಿರಲೇ ಇಲ್ಲ. ರಾಧೆಯ ಕಡೆ ಕಣ್ಣೆತ್ತಿ ನೋಡದೆ ವಿವಾಹದ ವಿಧಿವಿಧಾನಗಳಲ್ಲಿ ಅನ್ಯಮನಸ್ಕತೆಯಿಂದ ಭಾಗಿಯಾಗಿದ್ದ. ಮದುವೆಗೆ ಬಂದವರೆಲ್ಲಾ ಬೆನ್ನ ಹಿಂದೆ ತಮ್ಮನ್ನು ಆಡಿಕೊಳ್ಳದೆ ಇರುವುದಿಲ್ಲ ಎನ್ನುವುದು ಅವನ ಕೊರಗು. 'ಈ ಅಪ್ಪ ಜವಾಬ್ದಾರಿ ಇರುವ ಸಂಸಾರಸ್ಥನಾಗಿದ್ದಿದ್ದರೆ ತನಗೆ ಈ ದುರ್ಗತಿ ಬರುತ್ತಿರಲಿಲ್ಲ' ಎನ್ನುವ ಕಿಸಿಸಿನಿಂದಲೇ ಅವನು ರಾಧೆಯ ಕೊರಳಿಗೆ ತಾಳಿ ಕಟ್ಟಿದ್ದ. ಒಂದಷ್ಟು ದಿನ ರಾಧೆಯ ಮುಖ ಕಂಡರೆ ಧುಮುಗುಟ್ಟುತ್ತಿದ್ದವನು ಕ್ರಮೇಣ ಹಾದಿಗೆ ಬಂದಿದ್ದ. ಒಲ್ಲದ ಮನಸ್ಸಿನಿಂದಲಾದರೂ ಸರಿ, ಅವಳನ್ನು ಸ್ವೀಕರಿಸಿದ್ದ. ತನ್ನ ಸುಸ್ವಭಾವದಿಂದ ಅವನನ್ನು ಗೆದ್ದುಕೊಂಡಿದ್ದಳು ರಾಧೆ.

***

'ತಪ್ಪಾಗಿದೆ ನಿಜ' ಸಾವಿರ ಸಲ ಅಂದರೆ ಕಮ್ಮಿ, ಅದಕ್ಕಿಂತಲೂ ಮಿಗಿಲಾಗಿ ಪಶ್ಚಾತ್ತಾಪಪಟ್ಟಿದ್ದಾರೆ ಮೂರ್ತಿಗಳು. ನೊಂದಿದ್ದಾರೆ, ಬೆಂದಿದ್ದಾರೆ. 'ಪರಾಮೋಷಿ' ಅನ್ನುವ ಪದಬಳಕೆಯೇ ಇದೆಯಲ್ಲ? ಯಾವುದೋ ಧೋರಣೆಯಿಂದ, ಏನೋ ಕಲ್ಪನೆಯಿಂದ. ಯಾವುದೋ ಅಜಾಗರೂಕತೆಯಿಂದ ಬದುಕಿನಲ್ಲಿ ತಪ್ಪು ನಡೆದು ಹೋಗಿಬಿಡುತ್ತದೆ. ಮದುವೆಯೊಂದು ಊರ್ಜಿತವಾಗದಿದ್ದರೆ 'ಇನ್ನೊಂದಿಷ್ಟು ವಿಚಾರಿಸಿಕೊಳ್ಳಬೇಕಿತ್ತು' ಎನ್ನುವ ಎದೆಗುದಿ, ಯಾವುದೋ ಕಾಯಿಲೆ ಹದ್ದು ಮೀರಿ ಜೀವಕ್ಕೆ ಆಪತ್ತು ತರುವಂತಾದರೆ 'ಸ್ವಲ್ಪ ಮೊದಲೇ ಎಚ್ಚೆತ್ತುಕೊಳ್ಳಬೇಕಿತ್ತು' ಎನ್ನುವ ಕೊರಗು, ಓದಿಗೆ ತಕ್ಕ ನೌಕರಿ ದೊರಕದೆ ಹೈರಾಣಾದರೆ 'ಇದರ ಬದಲು ಅದನ್ನು ಓದಬೇಕಾಗಿತ್ತು' ಎನ್ನುವ ಸಂಕಟ, ಇಂತವು ಯಾರ್ಯಾರ ಬದುಕಿನಲ್ಲಿ ಎಷ್ಟೆಷ್ಟು ನಡೆದು ಹೋಗಿವೆಯೋ ಯಾರಿಗೆ ಗೊತ್ತು? ಸರಿಪಡಿಸಿಕೊಳ್ಳಲಾಗದ ತಪ್ಪುಗಳು ಬದುಕಿನ ಅವಿಭಾಜ್ಯ ಭಾಗವಾಗಿರುತ್ತವೆಯೇ? ಹಣೆಬರಹ ಎನ್ನುವುದು ಇದಕ್ಕೇನಾ?

ಒಬ್ಬನೇ ವಂಶೋದ್ಧಾರಕನೆಂದು ಮಧುಸೂದನನಿಗೆ ಮನೆಯಲ್ಲಿ ಮುದ್ದು ಜಾಸ್ತಿ. ಅದರಲ್ಲೂ ಅಮ್ಮನ ಮುದ್ದು. ನಡುವಯಸ್ಸಿಗೆ ಬರುತ್ತಿರುವ ಮೂರ್ತಿಗಳಿಗೆ ಹೆಗಲು ಮುರಿಯುವಷ್ಟು ಸಂಸಾರದ ಭಾರ. ಮದುವೆಗೆ ಬೆಳೆದು ನಿಂತ ಇಬ್ಬಿಬ್ಬರು ತಂಗಿಯರು. ವಯಸ್ಸು ಮೀರುತ್ತಿರುವ ಅವರನ್ನು ಒಂದೊಳ್ಳೆಯ ಮನೆ ಹುಡುಕಿ ಸೇರಿಸಬೇಕೆಂಬ ಜವಾಬ್ದಾರಿ. ಸಾಲದ್ದಕ್ಕೆ ಇವರಿಗೂ ಇಬ್ಬರು ಹೆಣ್ಣುಮಕ್ಕಳು ಹುಟ್ಟಿ, ಇದೊಂದು ಮುಗಿಯದ ಬವಣೆ ಎನ್ನುವ ತಲೆಬಿಸಿ. ಆ ಕಾಲ ಬಹಳ ಮುಂದಿದ್ದರೂ ಎಂತದೋ ವ್ಯಸನ. ಅಪ್ಪ ಬದುಕಿದ್ದಾಗ ಪದೇ ಪದೇ ಉರು ಹಾಕುತ್ತಿದ್ದರು, 'ತಂಗಿ ಮದುವೆ ಮಾಡೋಕೆ ಮುಂಚೆ ನಿಂಗೆ ಅವಸರ ಆಗ್ಬಾರ್ದಿತ್ತು. ಏನಿದ್ರೂ ಮೊದಲು ಜವಾಬ್ದಾರಿ. ಆಮೇಲೆ ಸ್ವಂತ ಸುಖ'

ಹಿರಿ ತಂಗಿಯೇ ಇವರಿಗಿಂತ ಏಳೆಂಟು ವರ್ಷ ಸಣ್ಣವಳು. ಆಮೇಲೆ ಮತ್ತೊಬ್ಬಳು. ಇಷ್ಟೊಂದು ಅಂತರಕ್ಕೆ ಕಾರಣ ನಡುಮಧ್ಯ ಮತ್ತಿಬ್ಬರು ಮಕ್ಕಳು ಹುಟ್ಟಿ ತೀರಿಕೊಂಡಿದ್ದಂತೆ. ಅಪ್ಪ ಕರ್ತವ್ಯ, ಜವಾಬ್ದಾರಿ ಎನ್ನುವ ದೊಡ್ಡ ದೊಡ್ಡ ಪದ ಉರುಳಿಸುವಾಗ ಮೈ ಪರಚಿಕೊಳ್ಳುವಂತಾಗುತ್ತಿತ್ತು ಮೂರ್ತಿಗಳಿಗೆ. ಮಕ್ಕಳನ್ನು ಹುಟ್ಟಿಸಿದವನಿಗೆ ಜವಾಬ್ದಾರಿ ಹೆಚ್ಚೋ ಅಥವಾ ಒಡಹುಟ್ಟಿದವನದ್ದೋ? ಅವರಿಬ್ಬರ ಮದುವೆಯಾಗುವವರೆಗೆ ಕಾಯುತ್ತಾ ಕೂತರೆ ಗಡ್ಡ ಹಣ್ಣಾಗುವುದು ಗ್ಯಾರಂಟಿ ಎನ್ನುವ ಪ್ರಾಯದ ಪೊಗರಿನ ಯೋಚನೆಗೆ ತಕ್ಕಂತೆ ಗುರುಬಲವೂ ಒದಗಿ ಬಂದು 'ಜೈ...' ಎಂದು ಮದುವೆ ಮಾಡಿ ಕೊಂಡು ಬಿಟ್ಟಿದ್ದರು ಮೂರ್ತಿಗಳು. ಅಪ್ಪ ಅರೆಮನಸ್ಸಿನಿಂದ ಸೈಗುಟ್ಟಿದ್ದರೂ ಅವರ ಕಣ್ಣಲ್ಲಿ ಇದು ಮಹಾಪರಾಧ. ಮಗನನ್ನು ಚುಚ್ಚಲು ಒಂದು ಅಸ್ತ್ರ. ಕೊನೆಗೂ ಅಪ್ಪ ಬದುಕಿದ್ದಾಗಲೇ ಇಬ್ಬರು ತಂಗಿಯರ ಮದುವೆ ಮಾಡಿ, ಇಬ್ಬರನ್ನೂ ಎರಡನೆಯ ಸಂಬಂಧಕ್ಕೆ ಕೊಟ್ಟಿದ್ದು ಮತ್ತೊಂದು ವಾರೆಯಾಗಿತ್ತು. 'ಹುಡುಕಿದ್ರೆ ಸಿಕ್ತಿದ್ರು... ಹುಡುಕಿದ್ರೆ ಸಿಕ್ತಿದ್ರು...' ಅನ್ನುತ್ತಿರುತ್ತಿದ್ದರು ಅಪ್ಪ. ಹೆಂಡತಿಯ ಮಗ್ಗುಲು ಬಿಟ್ಟು ಕರ್ತವ್ಯಪಾಲನೆ ಮಾಡಲು ಮಗನಿಗೆ ಉದಾಸೀನ ಬಂದಿತ್ತು ಎಂದು ಅವರ ತರ್ಕ. ಅವರೇ ಮುಂದೊತ್ತಿ ಹೋಗಲು ವಯಸ್ಸಿನ ಹಳೆ. ಒಟ್ಟಿನಲ್ಲಿ ಮೂರ್ತಿಗಳು ಅಪ್ಪನ ಕಣ್ಣಲ್ಲಿ ಸ್ವಾರ್ಥಿ ಆಗಿಬಿಟ್ಟಿದ್ದರು. ಆಮೇಲೆ ಅವರಿಗೊಬ್ಬ ಮಗ ಹುಟ್ಟಿ, ಬದುಕು ಸುಖದ ರುಚಿ ತೋರಿಸುತ್ತಿದೆ ಅಂದುಕೊಳ್ಳುವಾಗ ಅಪ್ಪನ ಕಾಯಿಲೆ. ಅವನು ಹೋಗಿದ್ದೇ ನೆಪ ಆಗಿ ಹಾಸಿಗೆ ಹಿಡಿದ ಅಮ್ಮ. ಅಡಿಕೆಮಂಡಿಯಲ್ಲಿ ಕುತ್ತಿಗೆಯವರೆಗೆ ಸಾಲ. ಬೇರೆ ಕಡೆಗಳಲ್ಲೂ ಎಲ್ಲಿ ಸಿಗುತ್ತದೋ ಅಲ್ಲೆಲ್ಲಾ ಸಾಲ. ತೌರಿನಲ್ಲಿ ಹೆಂಡತಿಗೆ ಹಾಕಿದ್ದ ಎರಡು ಚಿನ್ನದ ಬಳೆಗಳು ಯಾವತ್ತೋ ಬಿಕರಿಯಾಗಿ 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ'ಯಾಗಿದ್ದುವು. ಕೆಲವರ ಹಣೆಬರಹವೇ ಹಾಗಿರುತ್ತದೆಯೇನೋ. ಯಾವಾಗ ನೋಡಿದರೂ ಏನೋ ಒಂದು ತಾಪತ್ರಯ. ರಗಳೆ.

'ಬೋರ್ಡು ಕಾಣಿಸಲ್ಲ ಅಂತಾನೆ. ಮುಂದೆ ಕೂರಿಸಿ ಅಂತಾನೆ. ಕಣ್ಣಿನ ಡಾಕ್ಟ್ರ ಹತ್ರ ಒಂದ್ಸಲ ತೋರಿಸ್ಕೊಂಡು ಬನ್ನಿ' ಪ್ರೈಮರಿ ಮೂರರಲ್ಲೋ, ನಾಲ್ಕರಲ್ಲೋ ಇದ್ದಾಗ ದಾರಿಯಲ್ಲಿ ಸಿಕ್ಕಿದ್ದ ಮಗನ ಮೇಷ್ಟ್ರು ಹೇಳಿದ್ದರು, ಲೋಕಾಭಿರಾಮದ ನಡುವೆ.

'ಮುಂದಿನ ಬೆಂಚಲ್ಲಿ ಅವನ ದೋಸ್ತಿ ಕೂರ್ತಾನಾ?'

'ಇರ್ಬೋದು. ಅವನಿಗೆ ಎಲ್ರೂ ದೋಸ್ತಿಗಳೇ...'

'ಅದಕ್ಕೇ ಮತ್ತೆ ಸಬೂಬು. ಸ್ವಲ್ಪ ಅಂಕೆಲಿಟ್ಕಂಬೇಕು ನೀವು. ಕೊಬ್ಬಿ ಹೋಗಿದಾನೆ...'

